<u>ಸಿ.ಸಿ .ನಂ.191/2022</u>                    <u>ಪಿಡಬ್ಲೂಃ 2</u>

<u>ದಿನಾಂಕಃ 06-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ</u>**

3. ಸಾಲವನ್ನು ಕೊಟ್ಟೆವು ಎಂದು ಹೇಳುವ ಸಂದರ್ಭದಲ್ಲಿ ನಾನು ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ . ಈ ಪ್ರಕರಣದ ಆರೋಪಿಯನ್ನು ನಾನು ನ್ಯಾಯಾಲಯಕ್ಕೆ ಬಂದಾಗ ನೋಡಿರುತ್ತೇನೆ. ಈ ಪ್ರಕರಣ ಪ್ರನಿಧಿಸಿದ ಶರತ ಗಣಪತಿ ನಾಯ್ಕ , ತುಳಸೀದಾಸ ರಾಮಾ ಪಟಗಾರ , ನಂದೀಶ ಹೆಚ್ ನಾಯ್ಕ ಇವರನ್ನು ನಾನು ಭೇಟಿಯಾಗಿಲ್ಲ ಎಂದರೆ ಸರಿ . ನನ್ನ ಪ್ರಕಾರ ಇದು ಸಂಘಕ್ಕೆ ನೀಡಿದ ಸಾಲ ಎಂದರೆ ಸರಿ . ಒಂದು ಸಂಘಕ್ಕೆ ಸಾಲ ಬೇಕು ಎಂದು ಆದ್ಲಿ ಸಂಘದವರು ಒಂದುಕ ಠರಾವನ್ನು ಮಾಡಬೇಕಾಗುತ್ತದೆ ಎಂದರೆ ಸರಿ . ಆ ಠರಾವಿನಲ್ಲಿ ಯಾವ ಸಹಕಾರಿಯಿಂದ ಯಾವ ಬ್ಯಾಂಕಿನಿಂದ ಸಾಲ ಪಡೆಯಬೇಕು ಎಂಬುದನ್ನು ಕೂಡ ಠರಾವು ಮಾಡಬೇಕಾಗುತ್ತದೆ ಎಂದರೆ ಸರಿ . ಅದೇ ರೀತಿ ಎಷ್ಟು ಮೊತ್ತದ ಸಾಲವನ್ನು ಪಡೆಯಬೇಕು ಎಂಬುದನ್ನು ಕೂಡ ಠರಾವು ಮಾಡಲಾಗುತ್ತದೆ ಎಂದರೆ ಸರಿ . ಸದರಿ ಠರಾವಿನಲ್ಲಿ ಯಾರು ಯಾರು ಎಷ್ಟು ಹಣವನ್ನು ಪಡೆಯಬೇಕು ಹಾಗೂ ಎಷ್ಟೆಷ್ಟು ಹಣವನ್ನು ಸಾಲವಾಗಿ ಪಡೆಯಬೇಕು ಹಾಗೂ ಅವರೆಲ್ಲರ ಸಹಿ ಠರಾವಿನಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲ . ಅಂತಹ ಠರಾವಿನ ಪ್ರತಿಯೊಂದಿಗೆ ಸಾಲದ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ ಎಂದರೆ ಅಂತಹ ಠರಾವನ್ನು ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಸಂಘದಲ್ಲಿ ಎಷ್ಟು ಜನರು ಇದ್ದಾರೆ ಅವರೆಲ್ಲರೂ ಸಹಿ ಮಾಡಬೇಕಾಗಿರುತ್ತದೆ ಎಂದರೆ ನೆನಪಿಲ್ಲ. ಸಾಲದ ಅರ್ಜಿಯಲ್ಲಿ ನಿಖರವಾಗಿ ನಮ್ಮ ಸಂಘಕ್ಕೆ ಎಷ್ಟು ಹಣ ಬೇಕು ಎಂದು ಬರೆಯಬೇಕಾಗುತ್ತದೆ ಎಂದರೆ ಸರಿ . ಅದನ್ನು ಅಂಕೆ ಮತ್ತು ಅಕ್ಷರಗಳಲ್ಲಿಯೂ ಕೂಡ ಬರೆಯಬೇಕಾಗುತ್ತದೆ ಎಂದರೆ ಸಾಕ್ಷಿ ನಮೂದಾಗಿರಬೇಕು ಎಂದು ನುಡಿದಿರುತ್ತಾರೆ . ಆ ರೀತಿ ನಮೂದಾಗಿಲ್ಲ ಎಂದರೆ ನಮ್ಮ ಬ್ಯಾಂಕಿನವರಿಗೆ ಎಷ್ಟು ಸಾಲ ಕೊಡಬೇಕು ಗೊತ್ತಾಗುವುದಿಲ್ಲ ಎಂದರೆ ಸರಿ.

ಎಷ್ಟು ಸಾಲ ಬೇಕು ಎಂದು ನಮೂದಿಲ್ಲದ ಅರ್ಜಿ ತಿರಸ್ಕೃತಗೊಳ್ಳುತ್ತದೆ ಎಂದರೆ ನೆನಪಿಲ್ಲ . ಎಷ್ಟು ಹಣದ ಸಾಲ ಬೇಕು ಎಂದು ನಮೂದು ಇಲ್ಲದಿದ್ದರೆ ಅದನ್ನು ಆಡಳಿತ ಮಂಡಳಿಯಲ್ಲಿಯೂ ಕೂಡ ಇಡುವುದಿಲ್ಲ ಎಂದರೆ ಸರಿ . ಸಾಲದ ಅರ್ಜಿಯಲ್ಲಿ ಸಂಘದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಬರೆಯಬೇಕಾಗುತ್ತದೆ ಎಂದರೆ ಸರಿಯಲ್ಲ. ಸ್ವಸಹಾಯ ಸಂಘದ ಸಾಲದ ಅರ್ಜಿಯನ್ನು ನಮ್ಮ ಬ್ಯಾಂಕಿನಲ್ಲಿರುವ ಪಾರ್ಮೆಟ್ ನಲ್ಲಿ ತುಂಬಿ ಕೊಡಬೇಕಾಗುತ್ತದೆ ಎಂದರೆ ಸರಿ . ಅದರ 7 ನೇ ಕಾಲಂನಲ್ಲಿ ಸಂಘದ ಹಣದ ಸ್ಥಿತಿಗತಿಗಳ ವಿವರ -ದಿನಾಂದವರೆಗೆ ಹಾಗೂ ಯಥಾ ಪ್ರತಿಯನ್ನು ಲಗತ್ತಿಬೇಕು ಎಂದು ಕೂಡ ಇರುತ್ತದೆ ಎಂದರೆ ಸರಿ . ಆಕಾರಣ ಮಾಹಿತಿಯನ್ನು ಕೊಡಬೇಕು ಹಾಗೂ ಅದರ ಜೊತೆಗೆ ದಾಖಲಾತಿಯನ್ನು ಲಗತ್ತಿಸಬೇಕು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅವರು ಹಣಕಾಸಿನ ಸ್ಥಿತಿಗತಿಯ ಬಗ್ಗೆ ದಾಖಲಾತಿ ಕೊಟ್ಟಿಲ್ಲ . ನಮ್ಮ ಪ್ರಕಾರ ಸಂಘದವರು ಕೊಟ್ಟಿರುವ ಸಾಲದ ಅರ್ಜಿ ನಿಪಿ-7 ಎಂದರೆ ಸರಿ . ಸದರಿ ಅರ್ಜಿಯಲ್ಲಿ ಎಷ್ಟು ಹಣ ಬೇಕು ಎಂದು ಎಲ್ಲೂ ನಮೂದಾಗಿಲ್ಲ ಎಂದರೆ ಸರಿ . ನಿಪಿ-7 ರಲ್ಲಿ ಆರೋಪಿಯ ಸಹಿ ಹಾಗೂ ಪೋಟೋ ಇಲ್ಲ ಎಂದರೆ ಸರಿ. ನಮ್ಮ ಸಹಕಾರಿಗೆ ಸಂಘದ ಸಾಲದ ಅರ್ಜಿ ಬಂದಾಗ ಆ ಸಂಘಪಿದ ಆರ್ಐ.ಕ ಸ್ಥಿತಿಗತಿಯ ಬಗ್ಗೆ ಪರಿಶೀಲನೆ ಮಾಡಿ ಸಾಲ ಕೊಡುತ್ತೇವೆ ಎಂದರೆ ಸರಿ ಹಾಗೂ ಆ ಬಗ್ಗೆ ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ . ಸಾಲದ ಅರ್ಜಿಯನ್ನು ಆಡಳಿತ ಮಂಡಳಿಯಲ್ಲಿ ಇಟ್ಟ ನಂತರ ಅಲ್ಲಿ ಠರಾವು ಆಗುತ್ತದೆ ಎಂದರೆ ಸರಿ . ಅಂತಹ ಆಡಳಿತ ಮಂಡಳಿಯ ಸಭೆ ಯಾವ ದಿನಾಂಕದಂದು ನಡೆಯಿತು ನೆನಪಿಲ್ಲ. ಆಡಳಿತ ಮಂಡಳಿಯ ಸಭೆ ನಡೆದಿದೆ ಎಂಬುದು ಗೊತ್ತಿದೆ. ಆಡಳಿತ ಮಂಡಳಿಯಲ್ಲಿ ಸಾಲ ಮಂಜೂರಾದ ನಂತರ ಸಾಲದ ಅರ್ಜಿಯ ಹಿಂದುಗಡೆ ಠರಾವು ನಂಬರ ಹಾಗೂ ಎಷ್ಟು ಸಾಲ ಮಂಜೂರಾಯಿತು ಹಾಗೂ ಠರಾವಿನ ದಿನಾಂಕ ಹಾಗೂ ಬಡ್ಡಿ ಹಾಗೂ ದಂಡ ಬಡ್ಡಿಯ ಬಗ್ಗೆ ನಮೂದು ಮಾಡುತ್ತೇವೆ ಎಂದರೆ ಸರಿ . ಆ ರೀತಿ ಮಂಜೂರಾದ ಬಗ್ಗೆ ನಾವು ಅವರಿಗೆ ತಿಳುವಳಿಕೆ ಪತ್ರ ಕೊಡುತ್ತೇವೆ ಎಂದರೆ ಸರಿಯಲ್ಲ. ಸಾಲ ಮಂಜೂರಾದ ಬಗ್ಗೆ ಅವರಿಗೆ ತಿಳುವಳಿಕೆ ಕೊಟ್ಟಿರುತ್ತೇವೆ . ತಿಳುವಳಿಕೆ ಪತ್ರ ಕೊಟ್ಟಿರುವುದಿಲ್ಲ. ಸಾಲದ ಅರ್ಜಿಯ ಹಿಂದೆ ಸಾಲ ಮಂಜೂರಾದ ಬಗ್ಗೆ ನಮೂದಿಸಿರುವುದನ್ನು ನಾನು

ನೋಡಿದ ಬಗ್ಗೆ ನೆನಪಿಲ್ಲ. ಸಾಲ ಮಂಜೂರಾದ ಠರಾವನ್ನು ನಾನು ನೋಡಿದ್ದೇನೆ. ಆ ದಿನ ಎಷ್ಟು ಸಾಲಗಳು ಮಂಜೂರಾಗಿತ್ತು ನೆನಪಿಲ್ಲ. ಆ ಠರಾವಿಗೆ ಎಷ್ಟು ಜನ ನಿರ್ದೇಶಕರು ಸಹಿ ಹಾಕಿದ್ದಾರೆ ನೆನಪಿಲ್ಲ. ಮುಖ್ಯ ಕಾರ್ಯ ನಿರ್ವಾಹಕರು, ಅಧ್ಯಕ್ಷರು ಸಹಿ ಹಾಕಿದ್ದಾರೆ ಮತ್ತೇ ಬೇರೆ ಯಾರು ಸಹಿ ಹಾಕಿದ್ದಾರೆ ನೆನಪಿಲ್ಲ. ಈ ಸಾಲಕ್ಕೆ ಸಂಬಂಧಪಟ್ಟಂತೆ ಯಾವುದೇ ಠರಾವು ಆಗಿಲ್ಲ. ಠರಾವು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಷ್ಟು ಸಾಲ ಮಂಜೂರಾಗಿದೆ , ಬಡ್ಡಿ ಹಾಗೂ ದಂಡ ಬಡ್ಡಿ ಆಕರಣೆ ಮಾಡಿದ ಬಗ್ಗೆ ಸಾಲದ ಅರ್ಜಿಯ ಹಿಂದೆ ಬರೆದಿರುವ ಠರಾವಿನ ಮೂಲಕ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನಮೂದು ಮಾಡಿದ ಆಧಾರದ ಮೇಲೆ ಗೊತ್ತಾಗುತ್ತದೆ. ಅದನ್ನು ಸಾಲದ ಅರ್ಜಿಯಲ್ಲಿ ನಮೂದು ಮಾಡುತ್ತಾರೆ. ನಿಪಿ-7 ಸಾಲದ ಅರ್ಜಿಯಲ್ಲಿ ಎಷ್ಟು ಹಣ ಮಂಜೂರಾಗಿದೆ ಎಂಬ ಬಗ್ಗೆ ಇಲ್ಲ ಎಂದರೆ ಸರಿ . ಈ ಸಾಲಕ್ಕೆ ಸಂಬಂಧಪಟ್ಟಂತೆ ಯಾವುದೇ ಸಾಲ ಮಂಜೂರಾಗಿಲ್ಲ ಕಾರಣ ಸಾಲದ ಅರ್ಜಿಯ ಹಿಂಭಾಗದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಸಾಲದ ಅರ್ಜಿಯ ಹಿಂದುಗಡೆ ಬರೆದ ಆಧಾರದ ಮೇಲೆ ಸಾಲದ ಕರಾರು ಪತ್ರ , ವಚನ ಪತ್ರ , ಆಂತರಿಕ ಒಪ್ಪಂದ ಪತ್ರ , ಬ್ಯಾಂಕಿನಿಂದ ಗುಂಪಿಗೆ ಸಾಲ ಪಡೆಯುವ ಒಪ್ಪಂದದ ಅನುಚ್ಛೇದ ಪತ್ರ, ಸ್ವಸಹಾಯ ಸಂಘಕ್ಕೆ ಸಾಲ ನೀಡಿದ ಪತ್ರ ಈ ಎಲ್ಲಾ ದಾಖಲೆಗಳಲ್ಲಿಯೂ ಎಷ್ಟು ಹಣ ಸಾಲ ನೀಡಿದ್ದೇವೆ ಅದಕ್ಕೆ ಆಕರಿಸಲಾದ ಬಡ್ಡಿ ನಮೂದಿಸಬೇಕಾಗುತ್ತದೆ ಎಂದರೆ ಸರಿ . ಸಾಲ ಮಂಜೂರಾಗದಿದ್ದರೆ ಎಷ್ಟು ಹಣ ಸಾಲ ನೀಡಿದ್ದೇವೆ ಎಷ್ಟು ಬಡ್ಡಿ ಎಂದು ನಮೂದಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ . ಸಾಲ ಮಂಜೂರು ಆಗದೇ ಇದ್ದರೆ ಎಷ್ಟು ಸಾಲ ಮಂಜೂರಾಯಿತು ಬರೆಯಲು ಆಗುವುದಿಲ್ಲ ಎಂದರೆ ಸಾಕ್ಷಿ ಸುಮ್ಮನೇ ನಿಂತಿರುತ್ತಾರೆ . ವಚನ ಪತ್ರ , ಆಂತರಿಕ ಒಪ್ಪಂದ ಪತ್ರ, ಸಾಲ ಒಪ್ಪಂದ ಅನುಚ್ಛೇದ ಇವುಗಳಲ್ಲಿ ಸಾಲ ನೀಡಿರುವ ಹಣ ಹಾಗೂ ಬಡ್ಡಿ ಎಷ್ಟು ನಿಖರವಾಗಿ ಬರೆದು ಸಾಲಗಾರರು ಹಾಗೂ ಜಾಮೀನುದಾರರಿಗೆ ತಿಳಿಸಬೇಕಾಗುತ್ತದೆ ಎಂದರೆ ಸರಿ . ವಚನ ಪತ್ರದಲ್ಲಿ ಎಷ್ಟು ಕಂತುಗಳು ಹಾಗೂ ಪ್ರತಿ ಕಂತಿನ ಹಣ ಎಷ್ಟು ಹಾಗೂ ಪ್ರತಿ ಕಂತಿನ ವಾಯಿದೆಯನ್ನು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಆ ರೀತಿ ವಚನ ಪತ್ರದಲ್ಲಿ ಕಾಲಂ ಇದೆಯಾ ಎಂದರೆ

ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ವಚನ ಪತ್ರದಲ್ಲಿ ಸಾಲದ ಕಂತುಗಳು ಎಷ್ಟು ಹಾಗೂ ಕಂತಿನ ರಖಂ ಎಷ್ಟು ಹಾಗೂ ಕಂತಿನ ವಾಯಿದೆ ವಚನಪತ್ರದಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ನಿಪಿ-10 ವಚನ ಪತ್ರದಲ್ಲಿ ಎಷ್ಟು ಸಾಲದಹಣ ನೀಡಿದ್ದಾರೆ ಎನ್ನುವ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ . ವಾರ್ಷಿಕ ಶೇಕಡ ಎಷ್ಟು ಬಡ್ಡಿ ಎಂಬುದು ಕೂಡ ನಮೂದಾಗಿಲ್ಲ ಎಂದರೆ ಸರಿ . ಅದೇ ರೀತಿ ಕಂತಿನ ರಖಂ ವಾಯಿದೆ ಕೂಡ ಖಾಲಿ ಇದೆ ಎಂದರೆ ಸರಿ . ವಚನ ಪತ್ರವನ್ನು ಯಾವ ದಿನಾಂಕದಂದು ಬರೆದುಕೊಟ್ಟರು ದಿನಾಂಕ ನಮೂದಾಗಿಲ್ಲ ಎಂದರೆ ಸರಿ . ಸದರಿ ದಾಖಲಾತಿಯ ಮೇಲೆ ಶಾಖಾ ವ್ಯವಸ್ಥಾಪಕರ ಸಹಿ ಹಾಗೂ ಸೀಲು ಇಲ್ಲ ಎಂದರೆ ಸರಿ . ವಚನಪತ್ರವನ್ನು ಬರೆಯುವಾಗ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಎಷ್ಟು ಸಾಲದ ಹಣ ಹಾಗೂ ಬಡ್ಡಿ ಎಂದು ವಿವರಣೆ ತಿಳಿಸಿ ಶಾಖಾ ವ್ಯವಸ್ಥಾಪಕ ಸಹಿ ಹಾಗೂ ಸೀಲು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ . ವಸೂಲಾತಿಯ ಅಧಿಕಾರಿಗಳು ತಿಳಿಸಿರುತ್ತಾರೆ ಅವರು ಸಹಿ ಹಾಕಿರುತ್ತಾರೆ . ಸಾಕ್ಷಿ ನಿಪಿ-10 ರಲ್ಲಿ ವಸೂಲಾತಿ ಅಧಿಕಾರಿ ಎಂದು ಹಾಕಿರುವ ಸಹಿ ವಸೂಲಾತಿಯ ಅಧಿಕಾರಿಯ ಸಹಿ ಎಂದು ನುಡಿದಿರುತ್ತಾರೆ . ವಸೂಲಾತಿ ಅಧಿಕಾರಿಯ ಯಾರು ಆಗಿದ್ದರು ಅವರ ಹೆಸರು ಗೊತ್ತಿಲ್ಲ. ಆ ಸಹಿಯನ್ನು ನೋಡಿದರೆ ನಂದೀಶ ಎಂದು ಬರೆದಂತೆ ಕಾಣುತ್ತದೆ ಎಂದರೆ ಗೊತ್ತಿಲ್ಲ . ಈ ಸಹಿಯನ್ನು ಮಾನ್ಯ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಪಡಿಸುವಾಗ ಟ್ರು ಕಾಪಿ ಎಂದು ಹಾಕಿರುವ ಸಹಿ ಎಂದರೆ ಗೊತ್ತಿಲ್ಲ . ನಂದೀಶ ಹೊಸಬಣ್ಣ ನಾಯಕ ಕೂಡ ವಸೂಲಾತಿ ಅಧಿಕಾರಿಯಾಗಿದ್ದರು ಎಂದರೆ ಸರಿ . ನ್ಯಾಯಾಲಯದಲ್ಲಿ ಪ್ರಮಾಣ ಪತ್ರದಲ್ಲಿ ಹಾಕಿರುವ ಸಹಿ ಹಾಗೂ ವಚನಪತ್ರದಲ್ಲಿರುವ ಸಹಿ ಎರಡು ಒಂದೇ ಎಂದರೆ ಸಾಕ್ಷಿ ಹಾಗೆ ಕಾಣುತ್ತಿಲ್ಲ ಎಂದು ನುಡಿದಿರುತ್ತಾರೆ. ಶರತ ಗಣಪತಿ ನಾಯ್ಕ ರವರ ಪ್ರಮಾಣ ಪತ್ರದಲ್ಲಿರುವ ಸಹಿ ಹಾಗೂ ನಿಪಿ-10 ರಲ್ಲಿರುವ ಸಹಿ ಅವರದ್ದೇನಾ ಎಂದರೆ ಗೊತ್ತಿಲ್ಲ.

4. ಆಂತರಿಕ ಒಪ್ಪಂದ ಪತ್ರ ಯಾವ ದಿನಾಂಕದಂದು ಬರೆಯಲ್ಪಟ್ಟಿದು ಅದು ಖಾಲಿ ಇದೆ ಎಂದರೆ ಸರಿ . ಅದರ ಕೊನೆಯ ಪುಟದಲ್ಲಿ ಎಷ್ಟು ಹಣ ಸಾಲವಾಗಿ ಪಡೆದಿದ್ದೇವೆ ಎಂಬುದು ಕೂಡ ಖಾಲಿ ಇದೆ ಎಂದರೆ ಸರಿ . ಈ ದಾಖಲೆಯಲ್ಲಾಗಲೀ ವಚನ ಪತ್ರದಲ್ಲಾಗಲೀ ಆರೋಪಿತ ಸಹಿ ಇಲ್ಲ ಎಂದರೆ ಸರಿ . ನಮ್ಮ ಬ್ಯಾಂಕಿನವರು ಯಾರು ಬರೆದಿದ್ದಾರೆ ಅವರ ಸಹಿ ಹಾಗೂ ಸೀಲು ಕೂಡ ಇಲ್ಲ ಹಾಗೂ ಶಾಖಾ ವ್ಯವಸ್ಥಾಪಕರ ಹಾಗೂ ಸಿಬ್ಬಂದಿಯ ಸಹಿ ಕೂಡ ಇಲ್ಲ ಎಂದರೆ ಸರಿ . ಆಂತರಿಕ ಒಪ್ಪಂದ ಪತ್ರ ಸಾಲ ಪಡೆಯುವ ಸಂಘದವರು ಅವರವರಲ್ಲಿ ಮಾಡಿಕೊಳ್ಳುವ ಒಪ್ಪಂದ ಪತ್ರ ಎಂದರೆ ಸರಿ . ಆ ಒಪ್ಪಂದ ಪತ್ರದಲ್ಲಿಯೂ ಕೂಡ ಎಷ್ಟು ಹಣ ಬೇಕು ಎಂದು ನಿಖರವಾಗಿ ಬರೆಯಬೇಕಾಗುತ್ತದೆ ಎಂದರೆ ಸರಿ . ಆ ಒಪ್ಪಂದ ಪತ್ರಕ್ಕೆ ಇಬ್ಬರು ಸಾಕ್ಷಿದಾರರ ಸಹಿ ಕೂಡ ಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಆ ಒಪ್ಪಂದ ಪತ್ರ ಯಾವ ದಿನಾಂಕದಂದು ಆಯಿತು ದಿನಾಂಕ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಒಪ್ಪಂದ ಪತ್ರ ಅಪೂರ್ಣವಾಗಿದ್ದರೆ ಸಾಲ ಮಂಜೂರು ಮಾಡುವುದಿಲ್ಲ ಎಂದರೆ ಸರಿಯಲ್ಲ. ಲೋನ್ ಎಗ್ರಿಮೆಂಟ್ ನಲ್ಲಿ ಯಾವ ಸಂಘಕ್ಕೆ ಸಾಲ ಕೊಡುತ್ತಿದ್ದೇವೆ ಹಾಗೂ ಅದರ ಕಚೇರಿ ಎಲ್ಲಿ ಇದೆ ಎಂಬುದನ್ನು ಕೂಡ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಲೋನ್ ಎಗ್ರಿಮೆಂಟ್ ಯಾವ ದಿನಾಂಕದಂದು ಮಾಡಲಾಗಿದೆ ಬರೆಯಬೇಕಾಗುತ್ತದೆ ಎಂದರೆ ಸರಿ . ಯಾವ ಸಂಘಕ್ಕೆ ಸಾಲ ಮಂಜೂರಾಗಿದೆ ಯಾವ ಠರಾವಿನ ಅನುಸಾರ ಸಾಲವನ್ನು ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ ಬರೆಯಬೇಕಾಗುತ್ತದೆ ಎಂದರೆ ಸರಿ . ಅದು ಸಮಾನ ಮಾಸಿಕ ಕಂತು , ತ್ರೈಮಾಸಿಕ ಕಂತು ಅಥವಾ ಅರ್ಧ ವಾರ್ಷಿಕ ಕಂತು ಬರೆಯಬೇಕಾಗುತ್ತದೆ ಎಂದರೆ ಸರಿ . ಆ ಯಾವ ಮಾಹಿತಿಯನ್ನು ಕೂಡ ಲೋನ್ ಎಗ್ರಿಮೆಂಟ್ ನಿಪಿ -12 ರಲ್ಲಿ ಬರೆದಿಲ್ಲ ಎಂದರೆ ಸರಿ . ಈ ದಾಖಲಾತಿಯಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿ . ನಿಪಿ-13 ನಾವು ಹೇಳಿದ ಸಾಲಕ್ಕೆ ಸಂಬಂಧಪಟ್ಟಂತೆ ಹಾಜರು ಪಡಿಸಿದ ದಾಖಲಾತಿ ಎಂದರೆ ಸರಿ . ಸಾಲ ಮಂಜೂರಾದ ನಂತರ ಸಾಲವನ್ನು ಸಂಘದ ಉಳಿತಾಯ ಖಾತೆಗೆ ವರ್ಗಾವಣೆ ಮಾಡಿರುತ್ತೇವೆ . ಸಾಲದ ಉಳಿತಾಯ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ದಾಖಲಾತಿ ಹಾಜರು ಪಡಿಸಿದ್ದೇವೆ . ಉಳಿತಾಯ

ಪಿಡಬ್ಲೂಃ 2

ಖಾತೆಯ ಅಕೌಂಟ್ ಸ್ಟೇಟಮೆಂಟ್ ಹಾಜರು ಪಡಿಸಿದ್ದೇವೆ . ಸಾಕ್ಷಿ ಕೇಸಿನ ಕಡತದಲ್ಲಿರುವ ದಾಖಲಾತಿಗಳನ್ನು ನೋಡಿ ಉಳಿತಾಯ ಖಾತೆಯ ದಾಖಲಾತಿ ಹಾಜರು ಪಡಿಸಿಲ್ಲ ಎಂದು ನುಡಿದಿರುತ್ತಾರೆ.

5. ಡಿಮಾಂಡ್ ಫ್ರಾಮಿಸರಿ ನೋಟಿನಲ್ಲೂ ಕೂಡ ಎಷ್ಟು ಸಾಲದ ಹಣವನ್ನು ಯಾವ ದಿನಾಂಕದಂದು ಮಂಜೂರು ಮಾಡಲಾಗಿದೆ ಹಾಗೂ ಬಡ್ಡಿ ಹಣವನ್ನು ಮಂಜೂರು ಮಾಡಬೇಕಾುಗುತ್ತದೆ ಎಂದರೆಸ ರಿ . ಅದೇ ರೀತಿ ಅದು ಮಾಸಿಕ , ತ್ರೈಮಾಸಿಕ ಬಡ್ಡಿ ಹಣವದ ಬಗ್ಗೆ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಡಿಮಾಂಡ ಫ್ರಾವಿಸರಿ ನೋಟ್ ನಲ್ಲಿ ದಿನಾಂಕ ಹಣ ನಮೂದಾಗಿಲ್ಲ ಎಂದರೆ ಸಾಕ್ಷಿ ದಿನಾಂಕ ನಮೂದಿದೆ ಎಂದು ನುಡಿದಿರುತ್ತಾರೆ. ಸನ್, ನೇ, ಇಸವಿ ತಾರೀಖು ಎಲ್ಲಾ ಖಾಲಿ ಇದೆ ಎಂದರೆ ಸರಿ . ನಮ್ಮ ಪ್ರಕಾರ ಈ ಸಾಲಕ್ಕೆ 1 ನೇ ಜಾಮೀನುದಾರರು ಯಾರು ಆಗಿದ್ದರು 2 ನೇ ಜಾಮೀನುದಾರರು ಯಾರು ಆಗಿದ್ದರು ನೆನಪಿಲ್ಲ. 1 ನೇ ಪ್ರತಿನಿಧಿ ಯಾರಾಗಿದ್ದರು , 2 ಮತ್ತು 3 ನೇ ಪ್ರತಿನಿಧಿ ಯಾರಾಗಿದ್ದರು ನೆನಪಿಲ್ಲ. ನಮ್ಮ ಸೌಹಾರ್ದವರು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕಿನವರು ಹಣ ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದರಿಂದ ಮೊದಲಿನ ಮೂರು ಜನ ಕೇಸನ್ನು ಪ್ರತಿನಿಧಿಸಿದ ವಸೂಲಾತಿ ಅಧಿಕಾರಿಗಳು ರಾಜೀನಾಮೆ ನೀಡಿದ್ದಾರೆ ಎಂದರೆ ಸರಿಯಲ್ಲ . ಸಾಲಕ್ಕೆ ಸಂಬಂಧಪಟ್ಟಂತೆ ಆರೋಪಿತರಿಗೆ ನೋಟಿಸನ್ನು ಕೊಟ್ಟಿದ್ದೇವೆ . ಎಷ್ಟು ಬಾರಿ ನೋಟಿಸು ಕೊಟ್ಟಿದ್ದೇವೆ ನೆನಪಿಲ್ಲ . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ಲೀಗಲ್ ನೋಟಿಸು ಕೊಟ್ಟಿದ್ದೇವೆ ನೆನಪಿಲ್ಲ . ಗಂಗೆಕೊಳ್ಳ ಗ್ರಾಮದಲ್ಲಿ ಪವಿತ್ರಾ ಎಂಬ ಹೆಸರಿನವರು ಎಷ್ಟು ಜನರು ಇದ್ದಾರೆ ಗೊತ್ತಿಲ್ಲ . ನಿಪಿ-6 ರಲ್ಲಿರುವ ಸಹಿ ಆರೋಪಿತಳದ್ದಲ್ಲ ಎಂದರೆ ಸರಿಯಲ್ಲ. ನಾವು ಹಾಜರು ಪಡಿಸಿದ ವಕೀಲರ ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ.

ಪಿಡಬ್ಲೂಃ 2

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.